ಕಡೆಯಿಂದ ಬರುವ ಅಭ್ಯರ್ಥಿಗಳನ್ನು ತಾವು ನೇಮಕ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ. ಆಯಾ ತಾಲ್ಲೂಕಿನವರನ್ನು ತೆಗೆದುಕೊಂಡು ಅಲ್ಲೇ ನೇಮಕ ಮಾಡಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾವು ಏನು ನೇಮಕ ಮಾಡುತ್ತೇವೆಯೋ ಆದರಲ್ಲಿ ಮೂರನೇ ಒಂದು ಅಂಶದಷ್ಟು ಡಾಕ್ಟರುಗಳು ರಿಪೋರ್ಟ್ ಮಾಡಿಕೊಳ್ಳುತ್ತಿಲ್ಲ. ಏಕೆಂದರೆ, ಅವರಿಗೆ ಪಟ್ಟಣ ಪ್ರದೇಶಗಳೇ ಬೇಕು. ಆದರ ಬಗ್ಗೆ ತಾವು ಏನು ಸೂಚನೆ ಕೊಟ್ಟಿದ್ದೀರಿ ಅದನ್ನು ಮಾರ್ಪಾಡು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಚಿಕ್ಕೋಡಿಯ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

113 (229) ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ, ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರದವರ ಮುಂದಿದೆಯೇ;

ಆ)ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಪರಿವರ್ತನಾ ಕಾರ್ಯವನ್ನು ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರು:– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯನ್ನು 100 ಬೆಡ್‌ಗಳಿಗೆ ಪರಿವರ್ತಿಸುವ ಕಾರ್ಯಕ್ರಮವಿದೆಯೇ ಎಂದು ನಾನು ಕೇಳಿರುವುದು. ಈ ಸಾರ್ವಜನಿಕ ಆಸ್ಪತ್ರೆಗೆ ಬಿಲ್ಡಿಂಗ್ ಕಟ್ಟಿಸುವ ಸಲುವಾಗಿ ಗೌರ್ನಮೆಂಟ್‌ನಿಂದ 80 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಆದರೆ ಉತ್ತರದಲ್ಲಿ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ. ಈ ಆಸ್ಪತ್ರೆಯ ವಿಸ್ತರಣೆಗೆ ಚಿಕ್ಕೋಡಿ ಮುನಿಸಿಪಾಲಿಟಿ ಕೌನ್ಸಿಲ್‌ನವರು ಸಹಿತಾ ಹಣ ಒದಗಿಸುತ್ತೇವೆಂದು ಹೇಳಿದ್ದಾರೆ. ಸರ್ಕಾರದಿಂದ ಇದರ ಜೊತೆಗೆ 80 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದ್ದರೂ ಇಲ್ಲವೆಂದು ಹೇಳುತ್ತಿದ್ದಾರೆ. ಇದರಬಗ್ಗೆ ತಮಗೆ ಏನಾದರೂ ತಪ್ಪು ಮಾಹಿತಿ ಬಂದಿದೆಯೇ ? ಅಥವಾ ಇನ್ನೊಂದು ಸಾರಿ ಉತ್ತರ ತರಿಸಿಕೊಂಡು ಹೇಳುತ್ತೀರೋ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ಚಿಕ್ಕೋಡಿಯಲ್ಲಿ 30 ಬೆಡ್ ಹಾಸ್ಪೆಟಲ್‌ನ್ನು 50 ಬೆಡ್‌ಗೆ ಅಪ್‌ಗ್ರೇಡ್ ಮಾಡಿದ್ದೇವೆ. The estimated cost for 50 beded Hospital is Rs. 72.71 lakhs. ಅದಕ್ಕಾಗಿ 72.81 ಲಕ್ಷ ರೂಪಾಯಿ ಮಂಜೂರಾಗಿದೆ. ಕರೆಂಟ್ ಇಯರ್ ಬಜೆಟ್‌ನಲ್ಲಿ 10.47 ಲಕ್ಷ ಪ್ರೊವೈಡ್ ಮಾಡಿದ್ದೇವೆ.ಅಲ್ಲಿ 2 ಮೆಡಿಕಲ್ ಆಫೀಸರ್ಸ್, 12 ಮೆಟರ್‌ನಿಟಿ ಬೆಡ್ಸ್, 18 ಜನರಲ್ ಬೆಡ್ಸ್ ಇದ್ದದ್ದನ್ನು, ಆದಷ್ಟು ಬೇಗನೆ 50 ಬೆಡ್ ಹಾಸ್ಪೆಟಲ್ ಆಗಿ ಪರಿವರ್ತನೆ ಮಾಡುತ್ತೇವೆ.

ಗ್ರಾಮಾಂತರ ಪ್ರದೇಶಗಳಿಂದ ಆಸ್ಪತ್ರೆಗಳ ಮಂಜೂರಾತಿಗಾಗಿ ವಂತಿಗೆ

114 (658) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅನೇಕ ಗ್ರಾಮದ ಜನರು ಆಸ್ಪತ್ರೆಗಳ ಮಂಜೂರಾತಿಯನ್ನು ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಜನರ ವಂತಿಕೆಯ ರೂಪದಲ್ಲಿ 25,000 ರೂ.ಗಳಂತೆ ಹಣ ಪಾವತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಯಾವ ಗ್ರಾಮಸ್ಥರು ಈ ರೀತಿ ಹಣ ತುಂಬಿದ್ದಾರೆ;

ಇ) ಅನೇಕ ವರ್ಷಗಳಿಂದ ಈ ರೀತಿ ಮನವಿ ಕೊಟ್ಟು ಹಣ ತುಂಬಿದ್ದಾಗ್ಯೂ ಈ ಗ್ರಾಮಗಳಿಗೆ ಆಸ್ಪತ್ರೆಗಳನ್ನು ಮಂಜೂರು ಮಾಡದೇ ಇರಲು ಕಾರಣವೇನು;

ಈ) ಈ ಗ್ರಾಮಗಳಿಗೆ ಈಗಲಾದರೂ ಸರ್ಕಾರವು ಆಸ್ಪತ್ರೆಗಳನ್ನು ಮಂಜೂರು ಮಾಡುವುದೇ ?

ಶ್ರೀ ಎಂ. ವೀರಪ್ಪ ಮೊಯಲಿ (ಮುಖ್ಯಮಂತ್ರಿಗಳು):–

ಅ) ಬಂದಿದೆ.

ಆ) ಗ್ರಾಮಸ್ಥರು ಹಣ ತುಂಬಿರುವ 125 ಗ್ರಾಮಗಳ ಹೆಸರುಗಳ ಪಟ್ಟಿಯನ್ನು ಲಗತ್ತಿಸಿದೆ.

ಇ) ದಿನಾಂಕ 1–4–87 ರಿಂದ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವುದನ್ನು ರದ್ದುಗೊಳಿಸಲಾಗಿದೆ. ಹಣ ಪಾವತಿ ಮಾಡಿದರೂ ಪ್ರಾಥಮಿಕ ಆರೋಗ್ಯ ಘಟಕಗಳನ್ನು 1–4–86 ರಿಂದ ಮಂಜೂರು ಮಾಡಲು ಅವಕಾಶವಿಲ್ಲ.

ಈ) ಈ ಗ್ರಾಮಗಳ ಪೈಕಿ 42 ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಈಗಿನ ನಿಯಮಾವಳಿಗಳ ಪ್ರಕಾವ ಬಯಲು ಪ್ರದೇಶದಲ್ಲಿ ಪ್ರತಿ 30,000 ಜನಸಂಖ್ಯೆಗೆ ಒಂದರಂತೆ ಮತ್ತು ಗುಡ್ಡಗಾಡು ಪ್ರದೇಶದಲ್ಲಿ ಪ್ರತಿ 20,000 ಜನ ಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿದ್ದು, ಅಂತಹ ಪ್ರಸ್ತಾವನೆಗಳು ಜಿಲ್ಲಾ ಪರಿಷತ್ತಿನಿಂದ ಸೂಕ್ತ ಬಡ್ಜೆಟ್ ಪ್ರಾವಿಷನ್ ಜತೆ ಬಂದಲ್ಲಿ ಮತ್ತು ಅಂತಹ ಹಳ್ಳಿಯ ಜನ ಹಣ ಡಿಪಾಸಿಟ್ ಮಾಡಿದ್ದಲ್ಲಿ ಸ್ಥಳಗಳಿಗೆ ಆದ್ಯತೆಯ ಮೇರೆಗೆ ಮಂಜೂರು ಮಾಡಲಾಗುವುದು.

ಗ್ರಾಮಸ್ಥರು 25,000 ರೂ. ವಂತಿಗೆ ಹಣ ಮತ್ತು 4 ಎಕರೆ ಭೂಮಿ ಇರಿಸಿರುವ ಪಟ್ಟಿ.

ಜಿಲ್ಲೆ	ತಾಲ್ಲೂಕು	ಕ್ರಮ ಸಂಖ್ಯೆ	ಪ್ರಾ.ಆ. ಕೇಂದ್ರ ಮಂಜೂರಾದ ಸ್ಥಳ	ಕ್ರಮ ಸಂಖ್ಯೆ	ಪ್ರಾ.ಆ. ಕೇಂದ್ರ ಮಂಜೂರಾಗದಿರುವ ಸ್ಥಳ
1	2	3	4	5	6
ಬೆಂಗಳೂರು ನಗರ	ಬೆಂಗಳೂರು (ಉತ್ತರ)		–	1	ಕಾಕೋಳು
– ” –	”		–	2	ಬ್ಯಾತ
– ” –	”		–	3	ಯೇ ಹಂಕ ಸಟಲೈಟ್ ಟೌನ್
ಬೆಂಗಳೂರು (ನಗರ)	ಬೆಂಗಳೂರು ದಕ್ಷಿಣ		–	4	ಬೆಲ್ಲಂದ ಇರು
ಬೆಂಗಳೂರು (ಗ್ರಾ.)	ದೇವನಹಳ್ಳಿ		–	5	ಕೊಯರಾ
”	ಚನ್ನಪಟ್ಟಣ	1	ಎಲೆತೋಟದಹಳ್ಳಿ		–
ಚಿತ್ರದುರ್ಗ	ಚಳ್ಳಕೆರೆ		–	6	ನಲ್ಲಗುಟ್ಟಲಹಳ್ಳಿ
”	ಜಗಳೂರು	2	ಮಲ್ಲಾಪುರ		–
”	”	3	ಪಲ್ಲಘಟ್ಟ	7	ಮುನ್ನೂರು
”	ಮೊಳಕಾಲ್ಮೂರು		–	8	ಹಿರೇಕೆರೆಹಳ್ಳಿ
”	ಹೊಸದುರ್ಗ		–	9	ದೇವಪುರ
”	ಹೊಳಲ್‌ಕೆರೆ	4	ತಾಳಿಕಟ್ಟೆ		–
ಶಿವಮೊಗ್ಗ	ಹೊನ್ನಾಳಿ		-	10	ಅರಕೆರೆ
	ಶಿವಮೊಗ್ಗ		--	11	ಕಡಕೊರ್
	ಹೊಸನಗರ	5	ಹುಂಚ		–
	ಚೆನ್ನಗಿರಿ			12	ಮರವಂತ್
	ಚೆನ್ನಗಿರಿ			13	ಪಾಂಡವನಟ್ಟಿ
ಕೋಲಾರ	ಬಂಗಾರಪೇಟೆ	6	ಗುಟ್ಟಳ್ಳಿ		–
	ಚಿಂತಾಮಣಿ		–	14	ತಲಗವಾಡ
	”	7	ಎಗವಕೋಟ		–
	ಕೋಲಾರ			15	ಬೆನ್ನಂಗೂರು
	ಕೋಲಾರ			16	ವಡಗೇರ
	ಮುಳಬಾಗಿಲು	8	ಮಲ್ಲಿನಾಯಕನಹಳ್ಳಿ		–
	ಶ್ರೀನಿವಾಸಪುರ	9	ಮೊಟಕುಪಲ್ಲಿ		–

	,,			17	ಪುಲ್ಲಗೊರ ಕೋಟ
	ಮಾಲೂರು	10	ತೋರಲಕ್ಕಿ		–
	ಶಿಡ್ಲಘಟ್ಟ	11	ಹೆಮ್ಮಾರನಹಳ್ಳಿ		
ತುಮಕೂರು	ತುಮಕೂರು	–	–	18	ಆಲ್ಲೂರು
,,	,,	–	–	19	ಹೊನಿಸಿಗೇರ
,,	,,	–	–	20	ರಾಮಗೊಂಡನ ಹಳ್ಳಿ
,,	,,	–	–	21	ಶೀತಕಲ್
,,	ತುರುವೇಕೆರೆ	–	–	22	ಶೀಗೇಹಳ್ಳಿ
	,,	12	ಕಣತ್ತೊರು	–	–
	,,	–	–	23	ಶೆಟ್ಟಿಗೊಂಡನಹಳ್ಳಿ
	ಮಧುಗಿರಿ		–	24	ನೇರಳೆಕೆರೆ
	,,		–	25	ದೊಡ್ಡೇರಿ
	ಪಾವಗಡ		–	26	ವಲ್ಲೂರು
	ಸಿರಾ		–	27	ತರೂರು
	,,		–	28	ಕೊತ್ತಿ
	ತಿಪಟೂರು	13	ಹಳೆಪಾಳ್ಯ	–	–
	ಗುಬ್ಬಿ	14	ಚಿಕ್ಕಕುನ್ನಾಲ	–	–
	,,	–	–	29	ಹೆಳವರಹಟ್ಟಿ
	ಕೊರಟಗೆರೆ		–	30	ತೀತ
	,,		–	31	ಪಟ್ಟಗಾನಹಳ್ಳಿ
ಬೆಳಗಾಂ	ಗೋಕಾಕ್	15	ಕಾನಗಾಂವ		
	ಸೌಂದತ್ತಿ	16	ಚಚಿಡಿ		
	,,	17	ಇಂಚಾಲ		
	ರಾಮದುರ್ಗ	18	ಹುಲ್‌ಕುಂದ್		–
	ರಾಯಬಾಗ		–	32	ಪಾಲ್‌ಭಾವಿ
	ಹುಕ್ಕೇರಿ	19	ನೇಗಿನಾರ್	19	
	,,		–	33	ಆನಂದಪುರ
	ಅಥಣಿ	20	ತೆಲಸಂಗ	20	–
	ಖಾನಾಪುರ		–	34	ಗೊಂದಿವಾಡ
	ಬೈಲಹೊಂಗಲ್	21	ಉಡ್ಕೇರಿ	21	
ಬಿಜಾಪುರ	ಬಿಜಾಪುರ		–	35	ಕನಮಡಿ
	,,		–	36	ಬಿಜ್ಜರ್ಗಿ

	ಜಮಖಿಂಡಿ		–	37	ಚಿಮ್ಮಡ
	,,		–	38	ಹಳಿಂಗಳಿ
	ಮುದ್ದೇಬಿಹಾಳ್		–	39	ಧವಳಗಿ
ಬಿಜಾಪುರ	ಬಾದಾಮಿ	–	–	40	ಸೂಳ್ಯ
	ಇಂಡಿ	–	–	41	ಲಚ್ಯಾನ
	ಇಂಡಿ	22	ಗೋಲ್‌ಸಂಗಿ	–	–
	ಇಂಡಿ	–	–	42	ಬಿ.ಕೆ. ಲೊನಿ
	ಹುನಗುಂದ	–	–	43	ನಾಗೂರು
	ಮುಧೋಳ್	–	–	44	ಅಲ್‌ಗಂದಿ
	ಮುಧೋಳ್	–	–	45	ಕೆ.ಜಂಬಗಿ
	ಹಾನಗುಂದ	23	ಆಮೀನಗಡ	–	–
	ಬಾದಾಮಿ	–	–	46	ಜಮ್ಮನಕಟ್ಟೆ
	ಸಿಂಧಗಿ	–	–	47	ಕುನ್ನಾಲ
	ಜಿ. ಬಾಗೇವಾಡ	–	–	48	ಹುಲವಾಡ
ಉತ್ತರ ಕನ್ನಡ	ಸಿರಸಿ	–	–	49	ಕೋರಲಕಟ್ಟೆ
	ಸಿರಸಿ	24	ಸುಗ್ಗಾವಿ	–	–
	ಸಿರಸಿ	25	ಸಾಲಂಕಿ	–	–
	ಹೊನ್ನಾವರ	26	ಬೆಳಲೂರು	–	–
	ಸಿದ್ದಾಪುರ	–	–	50	ದೊಡ್ಡಮನೆ
	ಅಂಕೋಲ	–	–	51	ಬೋವಿಕೆರೆ
ಧಾರವಾಡ	ಹಾವೇರಿ	27	ದೇವರಗಿ	52	ಕರಜ್ಗಿ
	ಹಾವೇರಿ	28	ಅಬ್ಬಿಗೆರೆ	–	–
	ರಾಣೆಬೆನ್ನೂರು		–	53	ಅರೆಮಲ್ಲಾಪುರ
	ನವಲಗುಂದ	–	–	54	ಅಮರಗೋಲ್
	ಧಾರವಾಡ	29	ಮುಗೊಂಡ್	–	–
	ಮುಂಡಗೋಲ	30	ಯಲ್ಲಿವಾಲ್	–	–
ಬೀದರ್	ಬಾಲ್ಕಿ	31	ವರವಟ್ಟಿ	–	–
	ಔರಾದ್	–	–	55	ಹೆಡ್ಡಗಾಪುರ
ರಾಯಚೂರು	ಯಲ್ಬುರ್ಗಾ	–	–	56	ಚಿಕ್ಕನ್‌ಕೊಪ್ಪ
	ಯಲ್ಬುರ್ಗಾ	–	–	57	ಬನ್ನಿಕೊಪ್ಪ
	ಯಲ್ಬುರ್ಗಾ	–	–	58	ಮುದೋಳ್
	ಕೊಪ್ಪಳ	–	–	59	ಕುಕ್ಕರಪಳ್ಳಿ

	ಕೊಪ್ಪಳ	32	ಇಂಡರಗಿ	–	–
	ಲಿಂಗನಗೂರು	33	ಸಜ್ಜಾಲಗುಡ್ಡ	–	–
	ಸಿಂಧನೂರು	–	–	60	ಬದ್ರಹಳ್ಳಿ
ಬಳ್ಳಾರಿ	ಬಳ್ಳಾರಿ	–	–	61	ಹೆಚ್. ವೀರಾಪುರ
	ಸಂಡೂರು	–	–	62	ಉಬ್ಬಲಗುಂಡಿ
ಮೈಸೂರು	ಹುಣಸೂರು			63	ಕಲ್ಲಳ್ಳಿ
	ಪಿರಿಯಾಪಟ್ಟಣ	34	ಚಿಕ್ಕನೇರಲ್		–
ಮಂಡ್ಯ	ಮಂಡ್ಯ		–	64	ಬಿ. ಹೊಸೂರು ಕಾಲೋನಿ
	ಮಂಡ್ಯ		–	65	ಗೋರ್‌ವಾಲೇ
	ಮಂಡ್ಯ	35	ಮಾರಗೊಂಡನ ಹಳ್ಳಿ		–
	ಮದ್ದೂರು	36.	ಗೆಜ್ಜೆಲಗೆರೆ		–
	ಮದ್ದೂರು	37	ಸಾದೊಳಲು		–
			–	66	ದೊಡ್ಡ ಹೊಸಗಾವಿ
	ಮಳವಳ್ಳಿ		–	67	ಧನಗ ನೂರು
	ನಾಗಮಂಗಲ	38	ದೊಡ್ಡಯಗಟಿ		–
ದಕ್ಷಿಣ ಕನ್ನಡ	ಮಂಗಳೂರು		–	68	ಕೊರ್ನಾಲ ಅಲೂರು
	ಸೂಳ್ಯ		–	69	ಅರಂತೋಡವ
	ಬಂಟ್ವಾಳ	39	ಕನ್ಯಾನ		–
	ಕುಂದಾಪುರ	40	ಕೀದೂರು		–
	ಬೆಳ್ತಂಗಡಿ			70	ಬೇಲೂರು
	ಬೆಳ್ತಂಗಡಿ			71	ಅಂಡಿಜೆ
	ಬೆಳ್ತಂಗಡಿ			72	ತೆಕ್ಕೆರ್
ಹಾಸನ	ಅರಸೀಕೆರೆ	41	ಕೊಂಡೇನಾಳು		–
	ಅರಸೀಕೆರೆ	42	ಶಶಿವಾಳ		–
	ಸಕಲೇಶಪುರ		–	73	ಈಚಲಬೀಡು
ಕೊಡಗು	ಸೋಮವಾರಪೇಟ		–	74	ತೋಳ್ಳೂರು ಶೆಟ್ಟಿಹಳ್ಳಿ
ಚಿಕ್ಕಮಗಳೂರು	ಸಿ. ಮಂಗಳೂರು		–	75	ಗುಡ್ಡದೂರು
	ತರೀಕೆರೆ		–	76	ಕುರುಕುಂಚಿ
	ತರೀಕೆರೆ		–	77	ಚೀರನಹಳ್ಳಿ

	ತರೀಕೆರೆ	–	78	ಬೋವಿಕೆರೆ
	ಕಡೂರು	–	79	ಹೋನೇನಹಳ್ಳಿ
ಬೆಂಗಳೂರು (ಗ್ರಾಮ)	ಮಾಗಡಿ	–	80	ಮಣ್ಣಿಗಾನಹಳ್ಳಿ
	ಮಾಗಡಿ	–	81	ಮಂಚನಬೆಲೆ
ಬೆಂಗಳೂರು (ನ)	ಬೆಂಗಳೂರು ದಕ್ಷಿಣ	–	82	ಇಮ್ಮಡಿಹಳ್ಳಿ
	ಚೆನ್ನಪಟ್ಟಣ	–	83	ವಿಶ್ವನಾಥಪುರ
		ಒಟ್ಟು 42		83 = 125

12.10 ಪಿ.ಎಂ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ನಾನು ಸದನದಲ್ಲಿ ಈ ಪ್ರಶ್ನೆಯನ್ನು ಕೇಳುವಂಥ ಮೂಲ ಉದ್ದೇಶ, ನಮಗೆ ಆಡಳಿತದಲ್ಲಿ ಅಧಿಕಾರಿಗಳನ್ನು ಭೇಟಿ ಮಾಡುವುದರಿಂದ, ಪತ್ರ ಬರೆಯುವುದರಿಂದ, ಎಲ್ಲಾ ಹಂತಗಳಲ್ಲಿ ಪರಿಹಾರ ಸಿಗದಿದ್ದಾಗ, ಕೊನೆಯದಾಗಿ ಈ ಸದನದಲ್ಲಾದರೂ ಪ್ರಶ್ನೆ ಕೇಳಿದರೆ ಪರಿಹಾರವು ಸಿಗುತ್ತದೆಯೋ ಏನೋ ಎನ್ನುವ ಉದ್ದೇಶದಿಂದ. ಆದರೆ ನಾನು ಕೇಳಿದ ಪ್ರಶ್ನೆಗೆ ಬಂದಿರುವಂಥ ಉತ್ತರವನ್ನು ನೋಡಿದಾಗ, ನಮ್ಮ ಪಶುಸಂಗೋಪನ ಇಲಾಖೆಯ ಸಚಿವರಾದ ಮಾನ್ಯ ನಾಗೇಗೌಡರು ಒಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರಗಳನ್ನು ನೋಡಿದಾಗ, ನಮ್ಮ ಉದ್ದೇಶ ಏನು ಇದೆಯೋ ಅದಕ್ಕೆ ಪರಿಹಾರ ಸಿಗುವುದು ಬೇಡ, ಕೊನೆಯ ಪಕ್ಷ ನ್ಯಾಯವಾದಂಥ ಒಂದು ಮಾಹಿತಿಯನ್ನಾದರೂ ಈ ಸದನಕ್ಕೆ ಸರಕಾರ ಒದಗಿಸುವಲ್ಲಿ ವಿಫಲವಾಗಿದೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುವುದ್ಕಕೆ ಇಷ್ಟ ಪಡುತ್ತೇನೆ. ನಾನು ಈ ಪ್ರಶ್ನೆಯನ್ನು ಓದುತ್ತೇನೆ. ''ಗ್ರಾಮಸ್ಥರು ಹಣ ತುಂಬಿರುವ 125 ಹಳ್ಳಿಗಳ ಹೆಸರುಗಳ ಪಟ್ಟಿಯನ್ನು ಲಗತ್ತಿಸಿದೆ'' ಮಾನ್ಯ ಅಧ್ಯಕ್ಷರೇ ಇದು ಸರಿಯಿಲ್ಲ. ನನ್ನ ಕ್ಷೇತ್ರದಲ್ಲಿಯೇ ತೆರೇದಕುಪ್ಪೆ ಎಂಬ ಹಳ್ಳಿಯಲ್ಲಿ ಹಣ ಕಟ್ಟಿ 10 ವರ್ಷಗಳು ಆಗಿವೆ. ಆ ಊರಿನ ಹೆಸರು ಈ ಪಟ್ಟಿಯಲ್ಲಿ ಇಲ್ಲ. ಆದ್ದರಿಂದ ನಮಗೆ ಒದಗಿಸಿರುವಂಥ ಮಾಹಿತಿಯು ಸರಿಯಾಗಿ ಇಲ್ಲ. ಬಹುಶಃ ಸರಕಾರದವರು ಅಧಿಕಾರಿಗಳು ಕೊಟ್ಟಂಥ ಮಾಹಿತಿಯು ಸರಿಯಾಗಿ ಇಲ್ಲ. ಬಹುಶಃ ಸರಕಾರದವರು ಅಧಿಕಾರಿಗಳು ಕೊಟ್ಟಂಥ ಮಾಹಿತಿಯನ್ನು ತಾಂತ್ರಿಕವಾಗಿ ರುಜು ಮಾಡಿ ಸದನಕ್ಕೆ ಸಚಿವರು ಕಳುಹಿಸುತ್ತಾ ಇದ್ದಾರೋ ಏನೋ ಎಂದು ವಿಧಿ ಇಲ್ಲದೇ ಹೇಳಬೇಕಾಗಿದೆ. ಎರಡನೇಯದಾಗಿ ದಿನಾಂಕ 1.4.1987ರಿಂದ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವುದನ್ನು ರದ್ದುಗೊಳಿಸಲಾಗಿದೆ. ಹಾಗೆಯೇ ಉತ್ತರದಲ್ಲಿ ಮುಂದಿನ ಸೆಂಟೆನ್ಸ್ ಹೀಗೆ ಇದೆ ಈ ಗ್ರಾಮಗಳ ಪೈಕಿ, 42 ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಮೊದಲನೆಯ ಸೆಂಟೆನ್ಸ್‌ನಲ್ಲಿ 1987ರಿಂದ ನಿಲ್ಲಿಸಲಾಗಿದೆ ಎಂದು ಹೇಳುತ್ತಾರೆ ಮುಂದಿನ 'ಸೆಂಟೆನ್ಸ್‌ನಲ್ಲಿ 42 ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ ಎಂದು ಹೇಳುತ್ತಾರೆ. ಅಂದರೆ ಅವರಿಗೆ ಬೇಕಾದವರಿಗೆ ಮಂಜೂರು ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ, ಬೇಡದಿದ್ದವರಿಗೆ ನಾವು ಬ್ಯಾನ್ ಮಾಡಿದ್ದೇವೆ ಎಂದು ಉತ್ತರಕೊಟ್ಟಿದ್ದಾರೆ ಎಂದು ಹೇಳಿದರೆ ಅದು ಅಪ್ರಸ್ತುತ ಅಥವಾ ಸತ್ಯಕ್ಕೆ ದೂರವಾದದ್ದು ಎಂದು ನನ್ನ ಭಾವನೆ. ಆದ್ದರಿಂದ ಇದಕ್ಕೆ ಸೂಕ್ತ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ನನ್ನ ಪ್ರಶ್ನೆ ಅಂದರೆ

10 ವರ್ಷಗಳಲ್ಲಿ ನಮ್ಮ ಹಳ್ಳಿಯವರು ಒಂದೆರಡು ರೂಪಾಯಿಗಳನ್ನು ಊರು ಊರುಗಳಲ್ಲಿ ಬಿಕ್ಷೆ ಬೇಡಿ, ಹತ್ತು ವರ್ಷಗಳಲ್ಲಿ ಸರಕಾರಕ್ಕೆ ಹಣವನ್ನು ಕೊಟ್ಟಿದ್ದಾರೆ. ಆದರೆ ಇವರು ಆ ಹಳ್ಳಿಗಳಿಗೆ ಆಸ್ಪತ್ರೆಯನ್ನೇ ಕೊಟ್ಟಿಲ್ಲ. ತಮ್ಮ ಉತ್ತರದ ಕೊನೆಯ ಭಾಗವನ್ನು ನೋಡಬೇಕು''ಹಳ್ಳಿಯ ಜನರು ಹಣವನ್ನು ಡಿಪಾಸಿಟ್ ಮಾಡಿದಲ್ಲಿ 'ಆ ಸ್ಥಳಗಳಿಗೆ ಆದ್ಯತೆಯ ಮೇರೆಗೆ ಮಂಜೂರು' ಮಾಡಲಾಗುವುದು'' ಎಂದು ಹೇಳಿದ್ದಾರೆ. ಏನು ಸ್ವಾಮಿ ಇದೆ? ಇದು ಉತ್ತರವೇ? ಒಂದು ಸೆಂಟೆನ್ಸ್‌ನಲ್ಲಿ ನಾವು ಬ್ಯಾನ್ ಮಾಡಿದ್ದೇವೆ ಎಂದು ಹೇಳುತ್ತೀರಿ, ಇನ್ನೊಂದು ಸೆಂಟೆನ್ಸ್‌ನಲ್ಲಿ 42 ಹಳ್ಳಿಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಮತ್ತೊಂದು ಸೆಂಟೆನ್ಸ್‌ನಲ್ಲಿ ಹಳ್ಳಿಯವರು ದುಡ್ಡು ಕಟ್ಟಿದರೆ ಮಂಜೂರು ಮಾಡಿಕೊಡುತ್ತೇವೆ ಎಂದು ಹೇಳುತ್ತೀರಿ? ದಯಮಾಡಿ ಇದಕ್ಕೆ ಸೂಕ್ತ ಉತ್ತರವನ್ನು ಕೊಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ):– ಅಧ್ಯಕ್ಷರೇ ನಾವು ಕೊಟ್ಟ ಉತ್ತರ ಸರಿಯಾಗಿದೆ. ಮಾನ್ಯ ಸದಸ್ಯರು ಇದನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂದು ಕಾಣುತ್ತದೆ. "Sanctioning of PHC is dispensed with, with effect from 1.4.87" The next reply is "Out of the above villages, 42 villages have already been sanctioned PHC".

ಅಂದರೆ 1.4.87ರಿಂದ ಆರೋಗ್ಯ ಘಟಕಗಳನ್ನು ಓಪನ್ ಮಾಡಲಿಲ್ಲ. ಕೇಂದ್ರಗಳನ್ನು ಓಪನ್ ಮಾಡಿದ್ದಾರೆ. ಅದರಲ್ಲಿ 125 ಹಳ್ಳಿಗಳ ಹೆಸರನ್ನು ಕೊಟ್ಟಿದ್ದೇವೋ ಅದರಲ್ಲಿ 42 ಕೇಂದ್ರಗಳನ್ನು ನಾವು ಈಗಾಗಲೇ ಸ್ಥಾಪನೆ ಮಾಡಿದ್ದೇವೆ. ಎಲ್ಲಿ ಜನರು ಈ 25 ಸಾವಿರ ರೂಪಾಯಿಗಳನ್ನು ಕಟ್ಟಿ ಸ್ಥಳ ಇತ್ಯಾದಿಗಳನ್ನು ಒದಗಿಸಿದ್ದಾರೋ ಅವರಿಗೆ ಆದ್ಯತೆಯ ಮೇಲೆ ಸ್ಯಾಂಕ್ಷನ್ ಮಾಡಲು ನೋಡುತ್ತೇವೆ. ಒಂದು ಕಂಡಿಶನ್ ಅಂದರೆ ಈ ಪೈನ್ ಏರಿಯಾದಲ್ಲಿ 30 ಸಾವಿರ ಜನಸಂಖ್ಯೆ ಇರಬೇಕು, ಗುಡ್ಡಗಾಡು ಪ್ರದೇಶದಲ್ಲಿ 25ಸಾವಿರ ಜನಸಂಖ್ಯೆ ಇರಬೇಕು. ಹೀಗೆ ಇದ್ದಲ್ಲಿ ಅಲ್ಲಿಗೆ ನಾವು ಸ್ಯಾಂಕ್ಷನ್ ಮಾಡುತ್ತೇವೆ.

ಇದಕ್ಕೆ ನಾವು ಆದ್ಯತೆ ಕೊಡುತ್ತೇವೆ. ಏಕೆಂದರೆ ಹೋದ ವರ್ಷ ಬರೀ 50 ಪಿ.ಎಚ್.ಸಿ.ಗಳನ್ನು ನಾವು ಸ್ಯಾಂಕ್ಷನ್ ಮಾಡಿದ್ದು. ಈ ವರ್ಷ 60 ಪಿ.ಎಚ್.ಸಿ.ಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಇಲ್ಲಿ ಪ್ರಿಯಾರಿಟಿ ಬೇಸಿಸ್‌ನಲ್ಲಿ ಇದನ್ನು ಬೇಗನೆ ಮಾಡುವುದಕ್ಕೆ ನೋಡುತ್ತಿದ್ದೇವೆ.

ಶ್ರೀ ವೈ.ಕೆ.ರಾಮಯ್ಯ:– ನನ್ನ ಮೊದಲನೆಯ ಪ್ರಶ್ನೆ. ನಿಮಗೆ ಒದಗಿಸಿರುವಂತಹ ಮಾಹಿತಿ ಸರಿಯಾಗಿಲ್ಲ. ಸನ್ಮಾನ್ಯ ಮಂತ್ರಿಗಳಿಂದ ಸರಿಯಾದಂತಹ ಉತ್ತರ ಬರಲಿಲ್ಲ. ನಾನೇ ನಿಂತುಕೊಂಡು ಹಳ್ಳಿಗಳಲ್ಲಿ ಹಣ ವಸೂಲು ಮಾಡಿ ತೆರೆದಕುಪ್ಪೆ ಹಳ್ಳಿಯಲ್ಲಿ 10 ನರ್ಷಗಳ ಹಿಂದೆ ಬ್ಯಾಂಕ್‌ನಲ್ಲಿ ಹಣವನ್ನು ತುಂಬಿದ್ದೇನೆ. ಆ ಊರಿನ ಹೆಸರನ್ನು ಈ ಪಟ್ಟಿಯಲ್ಲಿ ತೋರಿಸಿಲ್ಲ. ಇದರಿಂದ ಅರ್ಥವೇನಾಗುತ್ತದೆ ಎಂದರೆ ನಿಮಗೆ ಒದಗಿಸಿರುವಂಥ ಮಾಹಿತಿ ತಪ್ಪು. ತಪ್ಪು ಮಾಹಿತಿಯನ್ನು ಒದಗಿಸಿದಂತಹ ಮಂತ್ರಿಗಳು ಅಥವಾ ಅಧಿಕಾರಿಗಳ ಮೇಲೆ ದಯಮಾಡಿ ಕ್ರಮ ತೆಗೆದುಕೊಳ್ಳಬೇಕು, ಇನ್ನು ಎರಡನೆಯದಾಗಿ 10–12 ವರ್ಷಗಳಿಂದ ಹಳ್ಳಿಗಳಲ್ಲಿ ರೈತರು ಕಟ್ಟಿದಂತಹ 25 ಸಾವಿರ ರೂಪಾಯಿಗಳು ಈ ಹಣವನ್ನು ವಾಪಸ್ಸು ಕೊಡಿ, ಇಲ್ಲ, ಸರ್ಕಾರ ಯಾವಾಗ ಆಸ್ಪತ್ರೆ ಮಂಜೂರು ಮಾಡುತ್ತದೆ ಎಂಬುದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೊಡಿ.

ಶ್ರೀ ಬ್ಲೇಸಿಯಸ್ ಎಂ.ಡಿಸೌಜ:– ಮಾನ್ಯ ಅಧ್ಯಕ್ಷರೇ, ಸದಸ್ಯರು ಹೇಳಿದ್ದಾರೆ ಒಂದು ಕಡೆ ಹಣವನ್ನು ಕೊಟ್ಟಿದ್ದಾರೆಂದು ಆದರೆ ಅದು ಈ ಪಟ್ಟಿಯಲ್ಲಿ ಬಂದಿಲ್ಲ. I am sorry for that. ಅದಕ್ಕೆ ತಕ್ಕ ಕ್ರಮವನ್ನು ಆಫೀಸರ್ ಮೇಲೆ ತೆಗೆದುಕೊಳ್ಳುತ್ತೇನೆ. ಏಕೆಂದರೆ 125 ಎಂದು ಕೊಟ್ಟಿದ್ದಾರೆ ಅದು ತಪ್ಪು ಇದೆ. ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮತ್ತೆ ಈ ಹಣವನ್ನು ಯಾವ ರೀತಿ

ಜನರಿಗೆ ಹಿಂದೆ ಕೊಟ್ಟಿದ್ದಾರೋ, ಅಲ್ಲಿ ಬೇಗನೆ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಪರಿಶೀಲನೆ ಮಾಡಿ ಇದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಮುಖ್ಯಮಂತ್ರಿಗಳು ಈ ವರ್ಷ ಕೊಡುತ್ತೇವೆಂದು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಕಳೆದ ಸುಮಾರು ಒಂದು ತಿಂಗಳ ಹಿಂದೆ ಸದನ ಸೇರಿದ್ದಾಗ ಈ ವರ್ಷ ಹಳ್ಳಿಗಳಿಗೆ ಆಸ್ಪತ್ರೆಯನ್ನು ಮಂಜೂರು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ತಾವು ಹೊಸದಾಗಿ ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡುತ್ತಿದ್ದೀರಿ. ಆಶ್ವಾಸನೆಗಳು ತಮ್ಮ ಗಮನಕ್ಕೆ ಬಂದಿದೇಯೋ ಬಂದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂಥ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಆಶ್ವಾಸನೆಯನ್ನು ಕೊಡುತ್ತಿರಾ ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಆ ಆಶ್ವಾಸನೆಗಳು ನನ್ನ ಗಮನಕ್ಕೆ ಬಂದಿಲ್ಲ. ಇದನ್ನು ನಾನು ಮುಖ್ಯಮಂತ್ರಿಗಳಿಗೆ ಹೇಳಿ ಆದಷ್ಟು ಬೇಗ ನಾವು ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡುತ್ತೇವೆ.

ಅಧ್ಯಕ್ಷರು:– ಲಕ್ಕಣ್ಣನವರ 161ಪ್ರಶ್ನೆಗೆ ಉತ್ತರ ಬಂದಿಲ್ಲದೆ ಇರುವುದರಿಂದ ತಡೆ ಹಿಡಿಯಲಾಗಿದೆ.

ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗಲು ಸರ್ಕಾರ ಕೈಗೊಂಡ ಕ್ರಮ

29 (511) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಆ) ಈಗ ಇರುವ ಎಷ್ಟು ಜನ ಮಂತ್ರಿಗಳು ಮಿತ ಸಂತಾನ ಅನುಸರಿಸುವರು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಈ ಕೆಳಕಂಡ ಅಂಶಗಳ ಮೇಲೆ ಸಾಮೂಹಿಕ ಶಿಕ್ಷಣ ಮಾಧ್ಯಮದ ಮೂಲಕ ಶಿಕ್ಷಣವನ್ನು ನೀಡಲಾಗುತ್ತಿದೆ.

ಅ) ಸಣ್ಣ ಕುಟುಂಬ ತತ್ವ:
ಆ) ತಡವಾಗಿ ವಿವಾಹವಾಗುವುದರ ಉಪಯೋಗ
ಇ) ಅಂತರದ ಹೆರಿಗೆಯಿಂದ ತಾಯಿ ಮತ್ತು ಮಗುವಿನ ಆರೋಗ್ಯ ಸುಧಾರಣೆ.
ಈ) ಮಗು ಮತ್ತು ತಾಯಿ ಉಳಿಯುವಿಕೆ ಮತ್ತು ಆರೋಗ್ಯ.
ಉ) ಆರು ಮಾರಕ ರೋಗಗಳ ವಿರುದ್ಧ ಲಸಿಕೆಗಳನ್ನು ನೀಡುವುದು.

2. ಕುಟುಂಬ ಕಲ್ಯಾಣ ಮತ್ತು ಲಸಿಕೆ ನೀಡುವ ಸೇವೆಯನ್ನು 176ಆಸ್ಪತ್ರೆಗಳು, 1262ಪ್ರಾಥಮಿಕ ಆರೋಗ್ಯ ಕೇಂದ್ರಗಳು, 623ಆರೆ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ 7793ಉಪಕೇಂದ್ರಗಳ ಮೂಲಕ ಒದಗಿಸಲಾಗುತ್ತಿದೆ.

3. ಸಂತಾನಹರಣ ಶಸ್ತ್ರ ಚಿಕಿತ್ಸೆ ನಡೆಸಲು ಖಾಸಗಿ ನರ್ಸಿಂಗ್ ಹೋಂಗಳಿಗೆ ಮಾನ್ಯತೆ ನೀಡಲಾಗುತ್ತಿದೆ.